## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ.ನಂ.68/2017**

ಫಿರ್ಯಾದಿ: ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸರು, ಸೇಡಂ.

-:: ವಿರುದ್ಧ ::-

ಆರೋಪಿತರು:1) ಶಂಕರ ತಂದೆ ಶರಣಪ್ಪ ಭೈರಾಮಡಗಿ,
ವಃ 42 ವರ್ಷ, ಉಃ ಕೂಲಿ ಕೆಲಸ,
ಸಾಃ ಬಸವ ನಗರ, ಸೇಡಂ.

2) ಕಾಂತಮ್ಮ ಗಂಡ ಶಂಕರ ರಾಠೋಡ,
ವಃ 50 ವರ್ಷ, ಉಃ ಕೂಲಿ ಕೆಲಸ,

3) ಶಾರದಾಬಾಯಿ ಗಂಡ ಸುರೇಶ ಜಾಧವ,
ವಃ 32 ವರ್ಷ, ಉಃ ಟೇಲರಿಂಗ್ ಕೆಲಸ,
ಆ-2 & 3 ಸಾಃ ಛೋಟಿ ಗಿರಣಿ, ಸೇಡಂ.

----

**ದೋ ಷಾ ರೋ ಪ ಣೆ**

ನಾನು ಶ್ರೀ ಮಹಾದೇವ ಕಾನಟ್ಟಿ, ಬಿಕಾಂ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ಆರೋಪಿತರಾದ ನೀವು ದಿನಾಂಕ 20-07-2016 ರಂದು ಮಧ್ಯಾಹ್ನ 2.30 ಗಂಟೆ ಸುಮಾರಿಗೆ ಸೇಡಂ ಪೊಲೀಸ್ ಠಾಣಾ ಹದ್ದಿಯಲ್ಲಿರುವ ಸೇಡಂ ಪಟ್ಟಣದ ಚೋಟಿ ಗಿರಣಿ ಏರಿಯಾದ ಹತ್ತಿರ ಖುಲ್ಲಾ ಜಾಗದಲ್ಲಿ ನೀವು ಅಕ್ರಮವಾಗಿ ಕಲಬೆರಕೆ ಸೇಂದಿಯನ್ನು ಯಾವುದೇ ಪರವಾನಿಗೆ ಇಲ್ಲದೇ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾಗ, ಚಾಸಾ-1 ಮತ್ತು 4 ರಿಂದ 8 ರವರು ಕೂಡಿಕೊಂಡು, ಚಾಸಾ-2 ಮತ್ತು 3 ನೇದ್ದವರ ಸಮಕ್ಷಮದಲ್ಲಿ ದಾಳಿ ಮಾಡಿ, ಆರೋಪಿತರಾದ ನಿಮ್ಮ ವಶದಲ್ಲಿದ್ದ 1 ಲೀಟರ್ ಅಳತೆವುಳ್ಳ ಒಟ್ಟು 43 ಕಲಬೆರಕೆ ಸೇಂದಿ ವಶಪಡಿಸಿಕೊಂಡಿದ್ದು, ಅಲ್ಲದೇ ಸದರಿ ಕಲಬೆರಕೆ ಸೇಂದಿ ಸೇವನೆಯಿಂದ ಮಾನವ ಜೀವಕ್ಕೆ ಹಾನಿಯಾಗುತ್ತದೆಂದು ಗೊತ್ತಿದ್ದರೂ ಸಹ ಕಲಬೆರಕೆ ಸೇಂದಿ ಮಾರಾಟ ಮಾಡಲು ಸಾಗಾಟ ಮಾಡಿದ್ದರಿಂದ, ಕಾರಣ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ಹಾಗೂ ಭಾ.ದಂ.ಸಂ. 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

24/1/20

ದಿನಾಂಕಃ 24-01-2020

ಪ್ರ.ದ.ನ್ಯಾ.ದಂ. ಸೇಡಂ.